# ಜೀವನ–ಸೃಷ್ಟಿಯ......

ಜೀವನ–ಸೃಷ್ಟಿಯ ಸಂಕಲನ
ಸಿಂಧುತ್ವದ ನವ ಜಾಗರಣ
ಗ್ರಾಮ–ಗ್ರಾಮದಿ ಮನೆ ಮಂದಿರದಿ
ಸುಜಲ ಜಾಗೃತಿಯ ಸಂಚಲನ

ಗಿರಿಕಂದರದಿ ಕಾನನದಿ ಹಸಿರಿನ ಹೊದಿಕೆಯ ಸಮತಲದಿ
ತಾಯಿ ಭಾರತಿಯ ಪಾದ ತೋಯಿಸುವ
ಹರಿವ ಧಮನಿಗಳ ಎಡ ಬಲದಿ

ನವ ಚೈತನ್ಯದ ನೊಗವೇರಿ ಉಳುಮೆಯ ನೇಗಿಲು ಭುವಿಸೀಳಿ
ಗೊರಸಿನ ಲಾಸ್ಯದ ಲಹರಿಗೆ ನಲಿಯುವ
ತರಿಯ ಬಗ್ಗಡದ ಕಣಕಣದಿ

ಕೆರೆ ಕಲ್ಯಾಣಿ ತಲಪರಕೆ ಒಡ್ಡು ಕುಂಟೆಗಳ ಕನವರಿಕೆ
ಸಾಂಪ್ರದಾಯಿಕ ನೆನಪಿನಂಗಳದ
ಕರ್ಮಭೂಮಿಯ ಬದುಗಳಲಿ

ನವ ಮುಂಗಾರಿನಲಂಕಾರ ಕಾಮನಬಿಲ್ಲಿನ ಚಿತ್ತಾರ
ಉದಕದ ಹನಿಗಳ ಈಡಿಗೆ ಮಾಗಿದ
ಕ್ಷಮಯಾ ಧರಿತ್ರಿಯ ಓಂಕಾರ

**ಜಲ ಭಾರತಿ**

**ಕರ್ನಾಟಕ ದಕ್ಷಿಣ ಪ್ರಾಂತ**